

ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟ ಅಭಿನವ್ ಬಿಂದ್ರಾ

## ಮರ್ಯಾದೆ ಉಳಿಸಿದ ಸಾಕ್ಷಿ, ಸಿಂಧು

ಒಲಿಂಪಿಕ್ಸ್‌ಗೆ ತೆರೆ ಬೀಳಲು ಒಂದು ವಾರ ಉಳಿದಿದ್ದಾಗ ಪದಕಗಳ ಕಾಣಿಕೆ ನೀಡಿದ ಕುಸ್ತಿ ಮತ್ತು ಬ್ಯಾಡ್ಮಿಂಟನ್ ಆಟಗಾರ್ತಿಯರು ದೇಶದ ಮಾನ ಕಾಪಾಡಿದರು.

58 ಕೆಜಿ ಫ್ರೀಸ್ಟೈಲ್ ವಿಭಾಗದ ಕುಸ್ತಿಯಲ್ಲಿ ಸಾಕ್ಷಿ ಮಲಿಕ್ ಕಂಚು ಗೆದ್ದರು. ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಸಿಂಧು ಐತಿಹಾಸಿಕ ಸಾಧನೆಯೊಂದಿಗೆ ಬೆಳ್ಳಿಯ ಮಿಂಚು ಹರಿಸಿದರು.

ವನಿತೆಯರ ಕುಸ್ತಿಯಲ್ಲಿ ಪದಕ ಗೆಲ್ಲುವ ಭರವಸೆ ಇದ್ದ ಬಬಿತಾಕುಮಾರಿ ಪೋಗಟ್ ಮೊದಲ ಸುತ್ತಿನಲ್ಲಿ ಸೋತರು. ಪದಕ ಗೆಲ್ಲುವ ಅವಕಾಶವಿದ್ದ ವಿನೇಶ್ ಪೋಗಟ್ ಗಾಯಗೊಂಡು ಹೊರಬಿದ್ದಿದ್ದು ಆಘಾತವಾಗಿತ್ತು. ಆ ನಷ್ಟವನ್ನು ಸಾಕ್ಷಿ ಮಲಿಕ್ ತುಂಬಿದರು. ಪುರುಷರ ಗ್ರಿಕೊ ರೋಮನ್ ವಿಭಾಗದ ಇಬ್ಬರೂ ಸ್ಪರ್ಧಿಗಳು ಮೊದಲ ಸುತ್ತಿನಲ್ಲಿಯೇ ಹೋರಾಟ ಮುಗಿಸಿದರು. ಯೋಗೇಶ್ವರ್ ದತ್ ಮಾತ್ರ ಭರವಸೆಯ ಬಿಂದುವಾದರು.

ವನಿತೆಯರ ಬ್ಯಾಡ್ಮಿಂಟನ್‌ನಲ್ಲಿ ಸೈನಾ ನೆಹ್ವಾಲ್ ಕೂಡ ಮೊಣಕಾಲಿನ ಗಾಯದ ನೋವು ಅನುಭವಿಸಿದರು. ಎರಡನೇ ಸುತ್ತಿನಲ್ಲಿ ಸೋತಿದ್ದು ದೇಶಕ್ಕೆ ನಷ್ಟವೇ ಸರಿ. ಆದರೆ,ಪುರುಷರ ವಿಭಾಗದಲ್ಲಿ ಕೆ. ಶ್ರೀಕಾಂತ್ ಕ್ವಾರ್ಟರ್‌ಫೈನಲ್ ಹಂತದವರೆಗೂ ದಿಟ್ಟ ಹೋರಾಟ ತೋರಿದ್ದು ಹೊಸ ಭರವಸೆ.

## ಭರವಸೆಯ ಬೆಳಕು ಚೆಲ್ಲಿದವರು

ತ್ರಿಪುರದ ದೀಪಾ ಕರ್ಮಾಕರ್ ಪದಕ ಗೆಲ್ಲಲಿಲ್ಲ. ಆದರೆ ಭಾರತದ ಕೋಟ್ಯಂತರ ಮನಸ್ಸುಗಳನ್ನು ಗೆದ್ದರು. ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನ ವಾಲ್ಟ್‌ನಲ್ಲಿ ನಾಲ್ಕನೆ ಸ್ಥಾನ ಪಡೆದಿದ್ದು ಸಣ್ಣ ಸಾಧನೆಯಲ್ಲ. ಸಿಮೊನ್ ಬೈಲ್ಸ್ ಅವರಂತಹ ಅತ್ಯುತ್ತಮ ಜಿಮ್ನಾಸ್ಟ್‌ಗೆ ಸ್ಪರ್ಧೆಯೊಡ್ಡಿದ ಖ್ಯಾತಿ ಅವರದ್ದು. ಅತ್ಯಂತ ಅಪಾಯಕಾರಿ ಪ್ರೊಡೊನೊವಾ ವಾಲ್ಟ್‌ನಲ್ಲಿ ಅವರು ತೋರಿದ ಕೌಶಲಕ್ಕೆ ಇಡೀ ವಿಶ್ವವೇ ನಿಬ್ಬೆರಗಾಗಿತ್ತು. ಆದರೆ, ಕೊನೆಯ ಹಂತದಲ್ಲಿ ಅದೃಷ್ಟ ಕೈಕೊಟ್ಟಿತ್ತು. ಆದರೆ, ಹತ್ತಾರು ಯುವ ಜಿಮ್ನಾಸ್ಟ್‌ಗಳಿಗೆ ದೀಪಾ ಆಶಾಕಿರಣವಾಗಿದ್ದಂತೂ ಸುಳ್ಳಲ್ಲ. ಒಲಿಂಪಿಕ್ಸ್ ಜಿಮ್ನಾಸ್ಟಿಕ್ಸ್‌ನಲ್ಲಿ ಸ್ಪರ್ಧಿಸಿದ ಭಾರತದ ಪ್ರಥಮ ವನಿತೆ ದೀಪಾ ಸೌಲಭ್ಯಗಳ ಕೊರತೆಯ ನಡುವೆಯೂ ಈ ಹಂತಕ್ಕೆ ಬೆಳೆದಿದ್ದು ಅವರ ಸ್ವಸಾಮರ್ಥ್ಯದಿಂದ.

ಅದೇ ರೀತಿ ಭಾರತಕ್ಕೆ ಅಪರೂಪವೆಂಬಂತೆ ಇರುವ ರೋಯಿಂಗ್ ಕ್ರೀಡೆಯಲ್ಲಿ ಮಹಾರಾಷ್ಟ್ರದ ದತ್ತು ಬೋಕನಾಳ್ ಕೂಡ ಸೆಮಿಫೈನಲ್ ಪ್ರವೇಶಿಸಿ ಗಮನ ಸೆಳೆದರು. ಗಾಲ್ಫ್‌ನಲ್ಲಿ ಬೆಂಗಳೂರಿನ ಅದಿತಿ ಅಶೋಕ್ ಅವರದ್ದು ಗಮನಾರ್ಹ ಸಾಧನೆಯಂತೂ ಹೌದು.


